ದಿನಾಂಕ **27-09-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.
ಮುಂದುವರೆದ ಪಾಟಿ ಸವಾಲು ಃ ಶ್ರೀ ಡಿ ಪಿ ಟಿ ವಾದಿ ಪರ ವಕೀಲರಿಂದ -

ಗೂಳಪ್ಪನ ಜೊತೆಗೆ ನನ್ನ ಮದುವೆ ಆಗಿ ಸುಮಾರು 27 ವರ್ಷಗಳಾಗಿರುತ್ತವೆ. ನನ್ನ ತಾಯಿ ಹೆಸರು ಕೆಂಪವ್ವ. ನನ್ನ ತವರು ಮನೆ ಕೋಚರಗಿ ಇರುತ್ತದೆ ಎಂದರೆ ಸರಿ . ಸುಮಾರು 27 ವರ್ಷಗಳಿಂದ ನಾವು ಗುಡಿಸ ಗ್ರಾಮದಲ್ಲಿ ವಾಸವಾಗಿರುತ್ತೇವೆ. ನಮಗೆ ಇಬ್ಬರು ಜನ ಮಕ್ಕಳು. ಇಬ್ಬರೂ ಮಕ್ಕಳು ಈಗ ಡಿಗ್ರಿ ಓದುತ್ತಿದ್ದಾರೆ. ಅವರ ಶಾಲೆಗೆ ನಾವೆ ದಾಖಲ ಮಾಡಿಸಿರುತ್ತೇವೆ.

ಈ ದಾವೆಯಲ್ಲಿ ತಕರಾರು ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಮ್ಮ ಮಾವ ಬಾಳಪ್ಪ ತೀರಿಕೊಂಡಿರುತ್ತಾರೆ. ಅವರ ವಾರಸಾ ಪ್ರಮಾಣ ಪತ್ರ ಮಾಡಿಸಿರುವುದಿಲ್ಲ. ವಾರಸಾ ಪ್ರಮಾಣ ಪತ್ರ ಪಡೆಯಲು ತಹಶೀಲ್ದಾರ ಇವರಿಗೆ ಅರ್ಜಿ ಕೊಡಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾರಸಾಕ್ಕೆ ಅರ್ಜಿ ಸಲ್ಲಿಸಿದಾಗ ತಹಶೀಲ್ದಾರ ಇವರ ಗ್ರಾಮ ಲೆಕ್ಕಾಧಿಕಾರಿಯವರಿಗೆ ಕಳುಹಿಸುತ್ತಾರೆ ಎಂದರೆ ಇರಬಹುದು. ಗ್ರಾಮ ಲೆಕ್ಕಾಧಿಕಾರಿ ಪಂಚನಾಮೆ ಮಾಡಿ ತೀರಿಕೊಂಡ ವ್ಯಕ್ತಿಯ ವಾರಸುದಾರರು ಯಾರು ಎಂದು ವರದಿ ಸಲ್ಲಿಸುತ್ತಾರೆ ಎಂದರೆ ನಮಗೆ ಗೊತ್ತಿಲ್ಲ. ಬಾಳಪ್ಪನ ಅಪ್ಪ ಗೂಳಪ್ಪ ಮೂಲ ಪುರುಷ ಎಂದರೆ ಸರಿ. ಅವರು ತೀರಿಕೊಂಡು ಬಹಳ ವರ್ಷಗಳಾಗಿರುತ್ತವೆ ಎಂದರೆ ಸರಿ. ಗೂಳಪ್ಪನಿಗೆ 3 ಜನ ಮಕ್ಕಳು. ಅವರೆಂದರೆ ಶೆಟ್ಟೆಪ್ಪ , ಬಾಳಪ್ಪ ಮತ್ತು ತಂಗೆವ್ವ ಎಂದರೆ ಸರಿ. ಬಾಳಪ್ಪನಿಗೆ ದುಂಡೆವ್ವ ಹೆಂಡತಿ ಮತ್ತು ಮಕ್ಕಳು ಗೂಳಪ್ಪ, ಮಾರುತಿ, ಲಕ್ಷ್ಮಿಬಾಯಿ , ಕೆಂಪವ್ವ ಎಂದರೆ ಸರಿ. ತಂಗೆವ್ವ ಇವರನ್ನು ಚಿಕ್ಕಾಲಗುಡ್ಡಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ .

ತಂಗೆವ್ವ ಹಕ್ಕು ಬಿಟ್ಟು ಕೊಟ್ಟು ಪ್ರಕಾರ ಶೆಟ್ಟೆಪ್ಪ ಮತ್ತು ಬಾಳಪ್ಪರವರ ಹೆಸರಿಗೆ ದಾವಾಸ್ತಿಗಳು ದಾಖಲ ಆಗಿರುತ್ತವೆ ಎಂದರೆ ಇರಬಹುದು. ಶೆಟ್ಟೆಪ್ಪ ದಿನಾಂಕ 2-10-1983 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶೆಟ್ಟೆಪ್ಪನ ಹೆಂಡತಿ ಹೆಸರು ಶಿವಲಿಂಗವ್ವ ಎಂದರೆ ಸರಿ. ಸಾಕ್ಷಿ ಮುಂದುವರೆದು ಶೆಟ್ಟೆಪ್ಪ ಮದುವೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಶೆಟ್ಟೆಪ್ಪ ಮತ್ತು ಶಿವಲಿಂಗವ್ವ ಇವರಿಗೆ ಶಿವನವ್ವ , ಬಸವ್ವ , ತುಳಸವ್ವ ಎಂಬ ಮಕ್ಕಳು ಇರುತ್ತಾರೆ ಎಂದರೆ ಸುಳ್ಳು. ಶಿವನವ್ವಳಿಗೆ ನ್ಯಾಮವ್ವ ಎಂದು ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಿವನವ್ವಳ ಮಕ್ಕಳು ಗಣಪತಿ ,ಗುರಪ್ಪ, ರಾವಸಾಬ ಎಂದರೆ ನನಗೆ ಗೊತ್ತಿಲ್ಲ. ತುಳಸವ್ವ 2003 ರಲ್ಲಿ

ತೀರಿಕೊಂಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ತುಳಸವ್ವಳಿಗೆ ವಾದಿ 5 ರಿಂದ 8 ಮಹಾದೇವಿ , ರೇಣುಕಾ , ರಾಜು ಮತ್ತು ಜಗದೀಶ ಎಂದರೆ ನನಗೆ ಗೊತ್ತಿಲ್ಲ. ಶೆಟ್ಟೆಪ್ಪನಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ಶೆಟ್ಟೆಪ್ಪನ ಆಸ್ತಿ ಎತ್ತಿ ಹಾಕುವ ಉದ್ದೇಶದಿಂದ ಅವರಿಗೆ ಮಕ್ಕಳು ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು 5 ನೇ ತರಗತಿ ಓದಿರುತ್ತೇನೆ. ಕನ್ನಡ ಓದಲು ಮತ್ತು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ತಹಶೀಲ್ದಾರ ಇವರು ಶೆಟ್ಟೆಪ್ಪ ಇವರ ವಾರಸಾ ಪ್ರಮಾಣ ಪತ್ರ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸುಮಾರು 30 ವರ್ಷಗಳ ಹಿಂದೆ ಶೆಟ್ಟೆಪ್ಪ ಇವರಿಗೆ ರೇಶನ ಕಾರ್ಡ ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಬಸವ್ವ ಶೆಟ್ಟೆಪ್ಪಾ ಬಂಗಾರಿ ಇವರ ಚುನಾವಣಾ ಗುರುತಿನ ಚೀಟಿ ಇದೆ ಎಂದರೆ ಸರಿಯಲ್ಲ.

ಹಿರಿಯರಿಂದ ಬಂದ 2 ಮನೆಗಳು ಇವರೆ ಎಂದರೆ ಸರಿಯಲ್ಲ. ಒಂದೇ ಮನೆ ಇರುತ್ತದೆ. 2 ಮನೆಗಳು ಉತ್ತರಕ್ಕೆ ಇವೆ ಎಂದರೆ ಸರಿಯಲ್ಲ. ಒಂದೇ ಮನೆ ಇರುತ್ತದೆ. ಸದ್ರಿ ಮನೆ ನಮ್ಮ ಅಜ್ಜ ಬಾಳಪ್ಪನ ಹೆಸರಿನಲ್ಲಿರುತ್ತದೆ. ಸದ್ರಿ ಮನೆ ನಂಬರ ನನಗೆ ಗೊತ್ತಿಲ್ಲ. ಪಶ್ಚಿಮ ಬಾಜು ಮನೆ ಮೈತ ಬಾಳಪ್ಪನ ಹೆಸರಿನಲ್ಲಿತ್ತು ಎಂದರೆ ಸರಿ . ಅದೇ ರೀತಿ ಪೂರ್ವಕ್ಕೆ ಇರುವ ಆಸ್ತಿ ನಂ. 426 ಇದು ಶೆಟ್ಟೆಪ್ಪನ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಆಸ್ತಿ ನಂಬರ 426 ರ ಮನೆಯಲ್ಲ ವಾದಿ ನಂ. 1 ಬಸವ್ವ ವಾಸವಾಗಿರುತ್ತಾಳೆ ಎಂದರೆ ಸುಳ್ಳು. ಶೆಟ್ಟೆಪ್ಪ ತೀರಿಕೊಂಡ ಬಳಿಕ ವಾರಸಾ ನಾತೆಯಿಂದ , ಶಿವನವ್ವ , ಬಸವ್ವ, ತುಳಸವ್ವ ಇವರ ಹೆಸರಿನಲ್ಲಿ ದಾಖಲ ಆಗಿರುತ್ತದೆ ಎಂದರೆ ಸುಳ್ಳು. 2 ಮನೆಗಳು ಇದ್ದರೂ ಸಹ ಒಂದೇ ಮನೆ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಳಪ್ಪನ ಹೆಸರಿನಲ್ಲಿದ್ದ ಮನೆಗೆ ಈಗ ಕೀಲಿ ಹಾಕಿರುತ್ತೇವೆ. ಬಾಳಪ್ಪನ ಮನೆಯಲ್ಲಿ ಮಾರುತಿ ಮತ್ತು ಮಹಾದೇವಿ ವಾಸವಾಗಿರುತ್ತಾರೆ ಎಂದರ ಸರಿಯಲ್ಲ. ಮಾರುತಿ ನಮ್ಮ ಮಾವ ಆಗಬೇಕು. ಮಾರುತಿಯ ಹೆಂಡತಿ ಹೆಸರು ಮಹಾದೇವಿಎಂದರೆ ನನಗೆ ಗೊತ್ತಿಲ್ಲ. ಮಾತಿ ಹೆಂಡತಿ ಮಹಾದೇವಿ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು 2 ನೇ ಪ್ರತಿವಾದಿ ಗೂಳಪ್ಪನ ಅಕ್ಕನ ಮಗಳು ಎಂದರೆ ಸರಿ. ನಮ್ಮ ಮದುವೆ ಆದಾಗಿನಿಂದ ಗುಡಸ ದಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ . ಮಾರುತಿ ಮದುವೆ ಆದ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. 2 ನೇ ಪ್ರತಿವಾದಿ ಗೂಳಪ್ಪ ಇವರು ಮನೆಯಲ್ಲಿರುತ್ತಾರೆ. ಮೊದಲು ಅವರು ಮಿಲಿಟರಿಯಲ್ಲಿದು ನಿವೃತ್ತಿಯಾಗಿರುತ್ತಾರೆ. ನಿವೃತ್ತಿಯಾದ ನಂತರ ಖಾಸಗಿ ನೌಕರಿ ಮಾಡುತ್ತಾರೆ ಎಂದರೆ ಸರಿ . ಈ ಹಿರೆಬಾಗೆವಾಡಿಯಲ್ಲಿ ಟೋಲ ನಾಕಾದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಕೆಲಸಕ್ಕೆ ಹೋಗಿ ಬಂದು ಮಾಡುತ್ತಾರೆ ಎಂದರೆ ಸರಿಯಲ್ಲ. ಅವರು ತಿಂಗಳಿಗೊಮ್ಮೆ ಬರುತ್ತಾರೆ. 2 ನೇ ಪ್ರತಿವಾದಿ ಈಗ ಸದೃಢವಾಗಿರುತ್ತಾರೆ ಎಂದರೆ ಸರಿಯಲ್ಲ.

1 ನೇ ವಾದಿ ಮತ್ತು ಶಿವನವ್ವ ಸೇರಿ ಇದೇ ನ್ಯಾಯಾಲಯದಲ್ಲಿ ಮೂಲ ದಾವೆ ನಂ. 64/2003 ರಂತೆ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಕೇಸನ್ನು ನಮ್ಮ ಅಜ್ಜ ಬಾಳಪ್ಪ ಮಾಡಿರುತ್ತಾರೆ ಎಂದರೆ ಸರಿ . ಅವರು ಆಸ್ತಿಗಳಿಗೆ ತಾವೆ ಮಾಲಿಕರು ಎಂದು ಘೋಷಿಸಲು ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ದಾವೆ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ದಾವೆಯ ಮೇಲೆ ಆರ್ ಎ ನಂ. 20/2012 ರಂತೆ ಅಪೀಲು ಮಾಡಿದ್ದರು ಎಂದರೆ ಸರಿ .

ಪ್ರತಿವಾದಿ ನಂ. 3 ಮಾರುತಿ ಈತನು ನಮ್ಮಗಳ ವಿರುದ್ಧ ಅಸಲು ದಾವೆ ನಂ. 31/2015 ರಂತೆ ದಾವೆ ಹೂಡಿರುತ್ತಾನೆ ಎಂದರೆ ಸರಿ . ಸದ್ರಿ ದಾವೆಯ ವಾದಪತ್ರ ಹಿಂತಿರುಗಿಸಲಾಗಿದ್ದು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವೆ 116/2022 ರಂತೆ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ .

**( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು)**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಆದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ